

ಕೇಳುವುದು ಸಹಜ. ಅದಕ್ಕೆ ನೀನು ಊಟ ನಿದ್ದೆ ಬಿಟ್ಟು ಕೂತ್ರೆ ಅರ್ಥವಿಲ್ಲ. ನಿನ್ನ ಸಂಕಟವೇನೂಂತ ಹೇಳಿದ್ರೆ ಅದಕ್ಕೊಂದು ಪರಿಹಾರ ಸೂಚಿಸಬಹುದು' ಎಂದು ಅಮ್ಮ ಸಹನೆಯಿಂದಲೇ ಉತ್ತರಿಸಿದಾಗ ಅವಳು ಇನ್ನಷ್ಟು ಸಿಡಿಮಿಡಿಗೊಂಡಳು.

'ನನಗೆ ಯಾರೂ ಆಸರೆ ಇಲ್ಲ. ಎದ್ದು ಅನಾಥಾಶ್ರಮಕ್ಕೆ ಹೋಗ್ಬೇಕಿತ್ತು. ಇಲ್ಲಿಗೆ ಬಂದು ತಪ್ಪು ಮಾಡಿದೆ' ಎಂದು ಇನ್ನಷ್ಟು ರಂಪಾಟ, ರಾದ್ಧಾಂತ ಮಾಡಿಕೊಂಡು ಮನೆಯವರೆಲ್ಲರ ಮನಸ್ಸನ್ನು ಕದಡಿಬಿಟ್ಟಳು.

ಅವಳು ಸ್ನಾನಕ್ಕೆ ಹೋದ ಸಮಯ ನೋಡಿ ಒಮ್ಮೆ ನಾನೇ ಅಮ್ಮನ್ನನ್ನು ವಿಚಾರಿಸಿದೆ.

'ಅವಳು ಏನೂಂತ ಬಾಯಿಬಿಡ್ತಾ ಇಲ್ಲ. ಗಂಡ ಮತ್ತು ಅವನ ಮನೆಯವರೂ ವಿಚಾರಿಸ್ತಿಲ್ಲ. ಕಾರಣ ಏನೂಂತ ಬೇಕಲ್ವಾ? ನೀನು ಒಪ್ಪಿಗೆ ಕೊಟ್ರೆ ನಾನು ಅಲ್ಲಿಗೆ ಹೋಗಿಬರ್ತೇನೆ. ಆದೀತಾ?' ಎಂದೆ. ಅಮ್ಮ ತುಂಬಾ ಆಲೋಚನೆಗೆ ಒಳಗಾದವರಂತೆ ಸ್ವಲ್ಪ ಹೊತ್ತು ಮಾತೇ ಆಡದೆ ಸುಮ್ಮನಿದ್ದಳು. ನಾನು ಅಮ್ಮನಿಗೂ ಸಮ್ಮತವಿಲ್ಲವೇನೋ ಎಂದು ಸುಮ್ಮನಾದೆ.

'ಇವಳು ಏನೂಂತ ಹೇಳದೆ ನಾವಾಗಿಯೇ ಆ ನಿರ್ಧಾರ ತೆಗೆದುಕೊಳ್ಳುವುದು ತಪ್ಪು ಮಾರಾಯಾ. ನೋಡು, ಇವಳು ಬಂದು ಇಷ್ಟು ಸಮಯವಾಯಿತು. ಗಂಡನಾಗಲಿ, ಇವಳ ಅತ್ತೆ ಮಾವನಾಗಲಿ ಏನೂ ಎಂತಾಂತ ವಿಚಾರಿಸಿದ್ರಾ? ನನಗೇನೋ ಸಮಸ್ಯೆ ಅವರಲ್ಲಿಯೇ ಇದೆ, ಇವಳದ್ದಲ್ಲ ಅನ್ಸುತ್ತೆ. ಇವಳ ಮನಸ್ಸಿಗೆ ನೋವಾಗುವ ಹಾಗೆ ಅವರೇನಾದ್ರೂ ನಡೆದುಕೊಂಡಿದ್ದಾರ ಅನ್ನೋದನ್ನು ತಿಳ್ಕೊಬೇಕು. ಆಯ್ತು, ನೀನು ಅಲ್ಲಿಗೆ ಹೋಗ್ಬೀಂತ ಇಟ್ಕೋ. ಅವರು ಇವಳ ಮೇಲೆಯೇ ಆರೋಪ ಹೊರಿಸಿ ತಪ್ಪಿತಸ್ಥಳೂಂತ ಹೇಳಿದ್ರೆ ನಿನ್ ಕೈಯಿಂದ ಸಹಿಸೋಕಾಗುತ್ತಾ? ಅವರಿಗೆ ಸೊಸೆ ಬಗ್ಗೆ ಕಾಳಜಿಯಿದ್ರೆ ಒಬ್ಳೇ ಹೋಗಿದ್ದಾಳೆ, ಎಲ್ಲಿ ಹೋಗಿದ್ದಾಳೆ ಏನು ಮಾಡ್ತಿದ್ದಾಳೆ ಅನ್ನೋ ಜವಾಬ್ದಾರಿನೂ ಇಲ್ವಾ?' ಅಮ್ಮ ತನ್ನ ನಿರ್ಧಾರವನ್ನು ಹೇಳಿದ ಮೇಲೆ ನನಗೂ ಸರಿ ಕಂಡಿತು. ನಾನು ನಿರುತ್ತರನಾದೆ.

ಮನೆಯಲ್ಲಿ ಯಾರಿಗೂ ಹೇಳದೇನೆ ನಾನು ಪುಣೆಗೆ ಹೋಗಿ ವಿಷಯ ತಿಳಿದುಕೊಂಡರೆ ಹೇಗೆ ಅನಿಸಿತು. ಕಾಕತಾಳೀಯವೆಂಬಂತೆ ಆಫೀಸ್‌ನಿಂದ ಆಡಿಟ್ ಕೆಲಸದ ಮೇಲೆ ನನ್ನನ್ನು ಮುಂಬೈಗೆ ಕಳುಹಿಸಿದರು. ನನ್ನ ಕೆಲಸವನ್ನು ಒಂದು ದಿನ ಮುಂಚಿತವಾಗಿಯೇ ಮುಗಿಸಿ ವಿಳಾಸ ಹುಡುಕಿಕೊಂಡು ಪುಣೆಯ ಹಾದಿಯನ್ನು ಹಿಡಿದೆ. ಹುಲ್ಲಿನ ಮೆದೆಯಲ್ಲಿ ಬಿದ್ದ ಸೂಜಿಯನ್ನು ಹುಡುಕುವಂತೆ ವಿಳಾಸವನ್ನು ಹುಡುಕುವ ಕೆಲಸ ನನ್ನದು. ಮದುವೆಯ ದಿವಸ ಅವರನ್ನು ನೋಡಿದ್ದು ಬಿಟ್ಟರೆ ನನಗೆ ಅವರ ಮನೆಯವರ ಮುಖ ಪರಿಚಯವೂ ಇಲ್ಲ. ಮದುವೆಯ ಆಲ್ಬಂ ನೋಡೋಣವೆಂದರೆ ಅದನ್ನೂ ಅವರೇ ಎತ್ತಿಕೊಂಡು ಹೋಗಿದ್ದಾರೆ ಎಂದು ತಿಳಿಯಿತು. ಹೇಗೂ ವಿಳಾಸವಿದೆಯೆನ್ನುವ ಧೈರ್ಯದಿಂದ ಅವರಿವರನ್ನು ವಿಚಾರಿಸಿದೆ. ಕಾರಿನವನಿಗೆ ಹಣ